**ಸಾಕ್ಷಿಯನ್ನು ದಿಃ 27.01.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನೀವು ಹಾಜರುಪಡಿಸಿರುವ ನಿಪಿ - 1 ಡಿಮ್ಯಾಂಡ್ ರಿಜಿಸ್ಟರ್ ಅಲ್ಲ ಎಂದರೆ ಸರಿಯಲ್ಲ.

2. ನಿಪಿ - 1 ಯಾವ ವರ್ಷಕ್ಕೆ ಸಂಬಂಧಿಸಿದ್ದು ಎಂದರೆ, ನಾವು ಪಡೆದು 5 ವರ್ಷವಾಯಿತು ಎಂದು ನುಡಿಯುತ್ತಾರೆ.

3. ಈ ದಾವೆಯನ್ನು ಪಂಚಾಯತಿಯಿಂದ ನನಗೆ ನೀಡಿರುವ ಮನೆಗೆ ಸಂಬಂಧಪಟ್ಟಂತೆ ಹಾಕಿರುತ್ತೇವೆ.

4. ನಿಪಿ - 1 ರಲ್ಲಿ ದಾವಾ ಸ್ವತ್ತಿನ ಚಕ್ಕುಬಂದಿ, ನಂಬರ್ ಹಾಗೂ ವಿಸ್ತೀರ್ಣ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ - 1 ಮರೂರು ಗ್ರಾಮದ ಆಸ್ತಿಗೆ ಸಂಬಂಧಿಸಿದ್ದು.

5. ನಿಪಿ - 1 ರಲ್ಲಿ ಕಲ್ನಾರ್ ಶೀಟಿನ ಮನೆ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ.

6. ಈ ದಾವೆಗೆ ವ್ಯಾಜ್ಯಕಾರಣ ಉಂಟಾದ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ತೊಂದರೆ ಕೊಡದೇ ಇದ್ದರೂ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

7. ನಿಪಿ - 6 ರಿಂದ 20 ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳಲ್ಲ ಎಂದರೆ ಸರಿಯಲ್ಲ.

8. ಪಿರಿಯಾಪಟ್ಟಣ ತಾಲೂಕು, ಹಾರನಹಳ್ಳಿ ಹೋಬಳಿ, ದೊಡ್ಡ ಹೊಸೂರು ಗ್ರಾಮದ ಸ.ನಂ.61/13 ಪಿ4 ರ ದಾಖಲಾತಿಗಳನ್ನು ನೀವು ನೋಡಿದ್ದೀರಾ ಎಂದರೆ, ನಾನು ನೋಡಿಲ್ಲ. ಸದರಿ ಸರ್ವೇ ನಂಬರ್ ದಾಖಲೆಗಳು ನಮ್ಮ ಮಾವ ಪುಟ್ಟರಾಜಪ್ಪನವರ ಹೆಸರಿನಲ್ಲಿವೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

9. ಸ.ನಂ.61/13 ಪಿ4 ರ ಜಮೀನು 1 ನೇ ಪ್ರತಿವಾದಿ ಕರಿಯಪ್ಪ ನವರಿಗೆ ಸರ್ಕಾರದಿಂದ ಮಂಜೂರಾದ ಜಮೀನು ಎಂದರೆ ಸರಿಯಲ್ಲ. ಮಂಜೂರಾದಾಗಿನಿಂದಲೂ ಸದರಿ ಜಮೀನಿಗೆ 1 ನೇ ಪ್ರತಿವಾದಿ ಸರ್ಕಾರಕ್ಕೆ ಕಂದಾಯ ಕಟ್ಟಿಕೊಂಡು, ವ್ಯವಸಾಯ ಮಾಡಿಕೊಂಡು, ಶೆಡ್ ಹಾಕಿಕೊಂಡು ವಾಸವಿದ್ದಾರೆ ಎಂದರೆ ಸರಿಯಲ್ಲ, ನಾವೇ ವಾಸವಿದ್ದೇವೆ.

10. ನಿಮ್ಮ ಪತಿಯ ಹಾಗೂ ಕೆ.ಸಿ. ಮಧು ರವರ ಮೇಲೆ ಪ್ರತಿವಾದಿಗಳು ಅ.ದಾ.ನಂ.27/2020 ರಂತೆ ದಾವೆ ಹಾಕಿದ ನಂತರ, ನೀವು ಈ ಸುಳ್ಳು ದಾಖಲೆಗಳನ್ನು ಸೃಷ್ಠಿಸಿಕೊಂಡು, ಈ ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

11. ದಾವಾ ಸ್ವತ್ತಿಗೆ ಹಾಗೂ ನಿಮಗೆ ಯಾವುದೇ ಸಂಬಂಧಲ್ಲ ಇಲ್ಲ ಎಂದರೆ ಸರಿಯಲ್ಲ.

12. ದಾವಾ ಆಸ್ತಿಯ ಅಳತೆ 40 x 40 ವಿಸ್ತೀರ್ಣ ಇದೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

13. ದಾವಾ ಆಸ್ತಿಗೆ ಯಾವುದೇ ಪಂಚಾಯತಿ ದೃಢೀಕರಣ ಇಲ್ಲ ಎಂದರೆ ಸರಿಯಲ್ಲ.

14. ಮರೂರು ಗ್ರಾಮಠಾಣೆ ಹಾಗೂ ದೊಡ್ಡ ಹೊಸೂರು ಗ್ರಾಮಠಾಣೆ ಬೇರೆ ಬೇರೆ ಎಂದರೆ ಸರಿ.

15. ನೀವು ಮರೂರು ಗ್ರಾಮ ಠಾಣೆಯಲ್ಲಿದ್ದುಕೊಂಡು, ದೊಡ್ಡ ಹೊಸೂರು ಗ್ರಾಮ ಠಾಣೆಯ ಸುಳ್ಳು ಷೆಡ್ಯೂಲ್ ಸೃಷ್ಠಿ ಮಾಡಿಕೊಂಡು, ಸುಳ್ಳು ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

16. ಪ್ರತಿವಾದಿಗಳಿಗೆ ತೊಂದರೆಯಾಲಿ ಎಂದು ಸುಳ್ಳು ದಾವೆ ಹೂಡಿ, ಸಾಕ್ಷಿ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ